ಶ್ರೀಮತಿ ಯಶೋಧರ ದಾಸಪ್ಪ.—ಹಾಗೆ ಆರ್ಗನೈಸರುಗಳಿಲ್ಲದೆ ಇದ್ದರೆ, ಇಂಥ ಕಡೆ ಆರ್ಗನೈಸರುಗಳಿಲ್ಲವೆಂದು ತಿಳಿಸಿದರೆ ಕಳಿಸುವುದಕ್ಕೆ ಏರ್ಪಾಡು ಮಾಡುತ್ತೇವೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸಮಾಜ ಕಲ್ಯಾಣ ಖಾತೆಯು ಹರಿಜನರ ಏಳಿಗೆಗಾಗಿ ದುಡಿಯುತ್ತಿಲ್ಲವೆಂದು 19 ಜನ ಶಾಸನ ಸಭಾ ಸದಸ್ಯರೂ ರಾಜಿನಾಮೆ ಕೊಟ್ಟಿರುವುದು ನಿಜವೇ ?

(No reply.)

Reconstitution of Municipal Councils in Bangalore District.

*Q.—774. Sri S. KARIAPPA (Kanakapura).—

Will the Government be pleased to state:—

(*a*) the date of expiry of the present term of each of the Municipal Councils in Bangalore District;

(*b*) the steps taken to reconstitute them?

A.—Sri K. PUTTASWAMY (Minister for Municipal Administration).

(*a*)—

	Name of the Municipal Council	*Date of expiry of the present term*
1	Corporation of the City of Bangalore	31-12-1963
2	Anekal	31- 3-1964
3	Channapatna	24- 5-1964
4	Devanahalli	31- 3-1964
5	Doddaballapur	31- 3-1964
6	Hoskote	17- 4-1964
7	Magadi	3- 4-1964
8	Nelamangala	17- 8-1964
9	Ramanagaram	3- 5-1965
10	Sarjapura	8- 8-1965
11	Kanakapura	31- 3-1964
12	Thyamagondlu	5- 2-1966
13	Vijaypura	31- 3-1964
14	Yelahanka	26- 4-1964

(*b*) (i) The term of office of the Councillors and Aldermen of the Corporation of the City of Bangalore has been extended for one year from the 1st January, 1964.

(ii) The Returning Officers (*i.e.*, the Tahsildars of Taluks) will take necessary action in accordance with the Rules relating to the election of Councillors to Town Municipal Councils as and when they become due for reconstitution.

ಶ್ರೀ ಎಸ್. ಕರಿಯಪ್ಪ.—ಬೆಂಗಳೂರು ನಗರ ಕಾರ್ಪೊರೇಷನ್ನಿನ ಕೌನ್ಸಿಲರುಗಳು ಮತ್ತು ಆಲ್ಡರ್‌ಮೆನ್ ಇವರ ಕಾರಾವಧಿಯನ್ನು ಹೆಚ್ಚಿಸುವುದಕ್ಕೆ ಇದ್ದಂಥ ಪ್ರಬಲವಾದ ಕಾರಣಗಳೇನು ?

ಶ್ರೀ ಕೆ. ಪುಟ್ಟಸ್ವಾಮಿ.—ಬೆಂಗಳೂರು ನಗರದ ಬೌಂಡರಿಯನ್ನು ಹೊಸದಾಗಿ ವಿಸ್ತರಿಸಲಾಯಿತು. ಆದುದರಿಂದ ವಾರ್ಡುಗಳ ವಿಂಗಡಣೆ ವಗೈರೆ ಮಾಡುವುದಕ್ಕೆ ಹೆಚ್ಚು ಕಾಲ ಬೇಕಾಗಿದ್ದುದರಿಂದ ಅವರ ಕಾರಾವಧಿಯನ್ನು ವಿಸ್ತರಿಸಲಾಯಿತು.

ಶ್ರೀ ಎಸ್. ಕರಿಯಪ್ಪ.—ಚುನಾವಣೆಗಳನ್ನು ನಡೆಸಿದರೆ ಹೊಸದಾಗಿ ಬರುವ ಕೌನ್ಸಿಲರುಗಳು ಮತ್ತು ಆಲ್ಡರ್‌ಮೆನ್‌ಗಳಿಗೆ ಇದನ್ನು ಮಾಡತಕ್ಕ ಅರ್ಹತೆಯಿಲ್ಲ ಎನ್ನುವ ಅಭಿಪ್ರಾಯಕ್ಕೆ ಬಂದಿರಾ ?

ಶ್ರೀ ಕೆ. ಪುಟ್ಟಸ್ವಾಮಿ.—ನಾನು ಉತ್ತರವನ್ನು ಇನ್ನೊಂದು ಸಲ ಹೇಳಿದರೆ ಮಾನ್ಯ ಸದಸ್ಯರಿಗೆ ಸರಿಯಾಗಿ ತಿಳಿಯುತ್ತದೆಂದು ಕಾಣುತ್ತದೆ. ಚುನಾವಣೆಗಳನ್ನು ಮಾಡಬೇಕಾದರೆ ಬೆಂಗಳೂರು ನಗರವನ್ನು ವಿಂಗಡಣೆ ಮಾಡಬೇಕು, ವಾರ್ಡುಗಳಾಗಿ ಮಾಡಬೇಕು. ಈ ವರ್ಷ ಬೆಂಗಳೂರು ನಗರದ ಬೌಂಡರಿಯನ್ನು ವಿಸ್ತಾರಮಾಡಲಾಯಿತು. ಬಹಳ ವರ್ಷಗಳಿಂದ ಜಯನಗರ ಮತ್ತು ರಾಜಾಜಿನಗರ ಇವೆಲ್ಲ ಬೆಂಗಳೂರಿನಲ್ಲಿಯೇ ಸೇರಿದ್ದರೂ ಅವು ಮುನಿಸಿಪಲ್ ಸರಹದ್ದಿಗೆ ಒಳಪಟ್ಟಿರಲಿಲ್ಲ. ಹೊಸದಾಗಿ ಮುನಿಸಿಪಲ್ ಸರಹದ್ದಿಗೆ ಒಳಪಡಿಸಲಾಯಿತು. ಹಾಗೆ ಒಳಪಡಿಸಿದ ನಂತರ ಪುನಃ ವಿಂಗಡಣೆ ಮಾಡಿ ಅನಂತರದಲ್ಲಿ ಚುನಾವಣೆ ಮಾಡುವ ಅವಶ್ಯಕತೆ ಇತ್ತು. ಅದಕ್ಕೆಸಾಕಷ್ಟು ಕಾಲವಿರಲಿಲ್ಲವಾದುದರಿಂದ ಅವರ ಕಾರಾವಧಿಯನ್ನು ವಿಸ್ತರಿಸಲಾಯಿತು.

ಶ್ರೀ ಬಿ. ಚನ್ನಬೈರೇಗೌಡ.—ಕಾಲಾವಕಾಶವಿರಲಿಲ್ಲವೆಂದು ಹೇಳಿದರು. ಚುನಾವಣೆಗಳು 31-12-63ಕ್ಕೆ ಆಗುತ್ತವೆ ಎಂದು ಗೊತ್ತಿರಲಿಲ್ಲವೇ ? ಕಾಲಕ್ಕೆ ಸರಿಯಾಗಿ ಏಕೆ ಪುನರ್ವಿಂಗಡಣೆ ಮಾಡಲಿಲ್ಲ ?

ಶ್ರೀ ಕೆ. ಪುಟ್ಟಸ್ವಾಮಿ.—ಈ ವರ್ಷದ ಅಂತ್ಯದಲ್ಲಿ ಬೆಂಗಳೂರು ಕಾರ್ಪೊರೇಷನ್ನಿನ ಅವಧಿ ಮುಗಿಯುತ್ತದೆ ಎನ್ನುವುದು ಗೊತ್ತಿತ್ತು. ಆದರೆ ಟ್ರಸ್ಟ್ ಬೋರ್ಡಿಗೆ ಸೇರಿದಂಥ ಭಾಗಗಳನ್ನು ಕಾರ್ಪೊರೇಷನ್ನಿಗೆ ತೆಗೆದುಕೊಳ್ಳಬೇಕಾದರೆ ಅದಕ್ಕೆ ಕೆಲವು ಕೆಲಸಗಳನ್ನು ಮಾಡಬೇಕಾದ್ದು ಅಗತ್ಯವಿದ್ದುದರಿಂದ ಆ ಕೆಲಸವೆಲ್ಲ ಮುಗಿಯಬೇಕಾದರೆ ನಿಧಾನವಾಯಿತು. ಅದು ಮುಗಿದ ಮೇಲೆ ಟ್ರಸ್ಟ್ ಬೋರ್ಡ್‌ನಿಂದ ಕಾರ್ಪೊರೇಷನ್ನಿನವರು ತೆಗೆದುಕೊಳ್ಳಲು ಒಪ್ಪಿಕೊಂಡಾಗಿ ಸರ್ಕಾರದವರು ಆ ಭಾಗವನ್ನು ಕಾರ್ಪೊರೇಷನ್ನಿಗೆ ಸೇರಿಸಿದರು. ಹಾಗೆ ಸೇರಿದ ನಂತರ ಹೆಚ್ಚು ಕಾಲವಿಲ್ಲದ್ದರಿಂದ ಮುಂದುವರಿಸಲಾಯಿತು.

ಶ್ರೀ ಎಸ್. ಎಂ. ಕೃಷ್ಣ.—ಬೆಂಗಳೂರು ಕಾರ್ಪೊರೇಷನ್ನಿಗೆ ಚುನಾವಣೆಗಳನ್ನು ಯಾವಾಗ ನಡೆಸಬೇಕೆಂದು ಸರ್ಕಾರದವರು ಏರ್ಪಾಡು ಮಾಡಿದ್ದಾರೆ ?

ಶ್ರೀ ಕೆ. ಪುಟ್ಟಸ್ವಾಮಿ.—ಮುಂದಿನ ವರ್ಷ, ಒಂದು ವರ್ಷದ ಅವಧಿಗೆ ವಿಸ್ತರಿಸಲಾಗಿದೆ. 1964 ನೇ ಡಿಸೆಂಬರಿಗೆ ಆ ಅವಧಿ ಮುಗಿಯುತ್ತದೆ. ಅಷ್ಟರೊಳಗಾಗಿ ಚುನಾವಣೆಗಳನ್ನು ನಡೆಸುತ್ತೇವೆ.

ಶ್ರೀ ಜಿ. ವಿ. ಗೌಡ.—ತಾವು ಹೇಳತಕ್ಕ ಕಾರಣವನ್ನು ಒಪ್ಪಬಹುದಾದರೂ ಆ ಅವಧಿಗಳನ್ನು ಕಡಮೆ ಮಾಡಿ ಮೂರು ತಿಂಗಳಲ್ಲೇ ಏಕೆ ಚುನಾವಣೆಗಳನ್ನು ಮಾಡಬಾರದಾಗಿತ್ತು ?

ಶ್ರೀ ಕೆ. ಪುಟ್ಟಸ್ವಾಮಿ.—ಮೂರು ತಿಂಗಳ ಕಾಲದಲ್ಲಿ ಹೆಚ್ಚು ಸಮರ್ಪಕವಾಗಿ ಆ ಕೆಲಸವನ್ನು ಮಾಡುವುದಕ್ಕಾಗುವುದಿಲ್ಲವೆಂದು ಸರ್ಕಾರಕ್ಕೆ ಮನದಟ್ಟಾದುದರಿಂದ ಒಂದು ವರ್ಷ ಮುಂದುವರಿಸಬೇಕಾಯಿತು.

ಶ್ರೀ ಎಸ್. ಶಿವಪ್ಪ.—ಬೆಂಗಳೂರು ನಗರ ಕಾರ್ಪೊರೇಷನ್ನಿನ ಚುನಾವಣೆಗಳನ್ನು ಮುಂದಕ್ಕೆ ಹಾಕಬೇಕಾಗುತ್ತದೆ ಎನ್ನುವ ಅಂಶವನ್ನು ಒಂದು ವರ್ಷದ ಮೊದಲೇ ಹೇಳುವುದಕ್ಕೆ ಪ್ರಬಲವಾದ ಕಾರಣಗಳೇನು, ಸ್ವಾಮಿ ?

ಶ್ರೀ ಕೆ. ಪುಟ್ಟಸ್ವಾಮಿ.—ಚುನಾವಣೆಗಳು ನವಂಬರ್ ಅಖ್ಯೆರಿನಲ್ಲಿ ಅಥವಾ ಡಿಸೆಂಬರ್ ಮೊದಲ ಭಾಗದಲ್ಲಿ ಈ ವರ್ಷ ನಡೆಯಬೇಕಾಗಿದ್ದುವು. ಕೇವಲ 2-3 ತಿಂಗಳು ಅವಧಿ ಇರುವಾಗ ಮಾತ್ರ ಚುನಾವಣೆಗಳನ್ನು ಮುಂದಕ್ಕೆ ಹಾಕಬೇಕೆಂದು ತೀರ್ಮಾನ ತೆಗೆದುಕೊಂಡಿದ್ದೇವೆ.

ಶ್ರೀ ಎಸ್. ಶಿವಪ್ಪ.—ಆರು ತಿಂಗಳ ಹಿಂದೆಯೇ ಆದದ್ದು ನಿಜವೇ ?

ಶ್ರೀ ಕೆ. ಪುಟ್ಟಸ್ವಾಮಿ.—ಆರು ತಿಂಗಳ ಹಿಂದೆ ಆಗಿಲ್ಲ. ನನಗೆ ತಾರೀಖು ನೆನಪಿಲ್ಲ. ಎರಡು ಮೂರು ತಿಂಗಳಾಗಿರಬಹುದು.